'ನೀಲಿ ನಾಯೀ ಕಣ್ಣು' ಅನ್ನೋಳು ನಾನೇನೇ,' ಅಂತ ನನ್ನನ್ನು ಅರ್ಥ ಮಾಡಿಕೊಳ್ಳುವ ಒಬ್ಬನೇ ಒಬ್ಬನಿಗೆ ತಿಳಿಸುವವಳ ಹಾಗೆ ಬೀದಿಯಲ್ಲಿ ಆಡ್ಡಾಡುವಾಗಲೂ ನೀಲಿ ನಾಯೀ ಕಣ್ಣೂ ಅಂತ ಗಟ್ಟಿಯಾಗಿ ಹೇಳುತ್ತಾ ವರ್ಷಗಟ್ಟಲೆ ಓಡಾಡಿದ್ದೇನೆ ಅಂದಳು:

ರೆಸ್ಟೊರೆಂಟ್‌ಗೆ ಹೋಗಿ ವೇಟರುಗಳಿಗೆ ಆರ್ಡರು ಮಾಡುವ ಮೊದಲು 'ನೀಲಿ ನಾಯಿ ಕಣ್ಣು' ಅಂತ ಹೇಳುತ್ತಿದ್ದೆ ಅಂದಳು, ವೇಟರುಗಳು ಗೌರವದಿಂದ ತಲೆ ಬಾಗಿಸುತಿದ್ದರು, ತಮ್ಮ ಕನಸಿನಲ್ಲಿ ಆ ಮಾತು ಹೇಳಿದ್ದವು ಅನ್ನುವ ನೆನಪೇ ಅವರಿಗೆ ಆಗುತ್ತಿರಲಿಲ್ಲ. ಆಮೇಲೆ ಟಿಶ್ಯೂ ಪೇಪರ್ ಮೇಲೆ ಪೆನ್ನಿನಲ್ಲಿ, ಟೇಬಲ್ಲಿನ ಮೇಲೆ ಊಟದ ಚಾಕುವಿನಲ್ಲಿ 'ನೀಲಿ ನಾಯೀ ಕಣ್ಣು' ಅಂತ ಬರೆಯುತ್ತಾ ಕೆತ್ತುತ್ತಾ ಇರೋಳು. ಹೋಟೆಲು, ಸ್ಟೇಶನು, ಸಾರ್ವಜನಿಕ ಕಟ್ಟಡಗಳ ಹೊಗೆಮಂಜು ತುಂಬಿದ ಕಿಟಕಿ ಗಾಜಿನ ಮೇಲೆ ತೋರು ಬೆರಳಿನಲ್ಲಿ 'ನೀಲಿ ನಾಯೀ ಕಣ್ಣು' ಅಂತ ಬರೆಯೋಳು. ಒಂದು ಸಲ ಔಷಧಿ ಅಂಗಡಿಗೆ ಹೋದೆ, ಅಲ್ಲಿದ್ದ ವಾಸನೆ ಒಂದು ಸಲ ನನ್ನ ಬಗ್ಗೆ ಕನಸು ಕಂಡ ಮೇಲೆ ಅವಳ ರೂಮಿನಲ್ಲಿದ್ದ ವಾಸನೆಯ ಹಾಗೇ ಇತ್ತು ಅಂದಳು. ಔಷಧಿ ಅಂಗಡಿಯ ಕ್ಲೀನ್ ಆದ ಹೊಸಾ ಟೈಲ್‌ಗಳನ್ನು ನೋಡುತ್ತಾ 'ಇಲ್ಲೇ ಎಲ್ಲೋ ಹತ್ತಿರದಲ್ಲೇ ಇರಬೇಕು ಅವನು,' ಅಂದುಕೊಂಡಳು. ಆಮೇಲೆ ಗುಮಾಸ್ತನ ಹತ್ತಿರ ಹೋಗಿ, 'ಯಾರೋ ಒಬ್ಬ ಕನಸಲ್ಲಿ ಬಂದು 'ನೀಲಿ ನಾಯೀ ಕಣ್ಣು' ಅನ್ನುತಾನೆ,' ಅಂದಳು. ಗುಮಾಸ್ತ ಅವಳ ಕಣ್ಣನ್ನು ನೋಡಿ, 'ನಿಜ ಹೇಳಬೇಕು ಅಂದರೆ, ಮೇಡಮ್, ನಿಮ್ಮ ಕಣ್ಣೂ ಹಾಗೇ ಇವೆ,' ಅಂದ. 'ನನ್ನ ಕನಸಿನಲ್ಲಿ ಬಂದು ಹಾಗನ್ನತಾನಲ್ಲಾ ಅವನನ್ನ ಹುಡುಕಬೇಕು ನಾನು,' ಅಂದಳು. ಗುಮಾಸ್ತನಿಗೆ ನಗು ಬಂದು ಕೌಂಟರಿನ ಇನ್ನೊಂದು ತುದಿಗೆ ಹೋಗಿಬಿಟ್ಟ. ಅವಳು ನೆಲಕ್ಕೆ ಹಾಕಿದ್ದ ಸ್ವಚ್ಛ ಟೇಲ್‌ಗಳನ್ನೇ ನೋಡುತ್ತಾ ಔಷಧದಂಗಡಿಯ ವಾಸನೆ ಹೀರುತ್ತಾ ನಿಂತಿದ್ದಳು. ಆಮೇಲೆ ಪರ್ಸು ತೆಗೆದು ಟೇಲ್ಸ್‌ಗಳ ಮೇಲೆ ಕೆಂಪು ಲಿಪ್‌ಸ್ಟಿಕ್ಕಿನಲ್ಲಿ, 'ನೀಲಿ ನಾಯೀ ಕಣ್ಣು,' ಅಂತ ಒಂದೊಂದೇ ಅಕ್ಷರ ಬರೆದಳು. ಗುಮಾಸ್ತ ವಾಪಸು ಬಂದ. 'ಮೇಡಮ್, ಟೈಲ್ಸು ಗಲೀಜು ಮಾಡಿದೀರಿ,' ಅಂದ. ವದ್ದೆ ಬಟ್ಟೆ ಕೊಟ್ಟು, 'ಒರೆಸಿ,' ಅಂದ. 'ನಾನು 'ನೀಲಿ ನಾಯೀ ಕಣ್ಣು' ಅನ್ನುತ್ತಾ, ನೆಲದ ಮೇಲೆ ಮೊಳಕಾಲೂರಿ, ಇಡೀ ಮಧ್ಯಾಹ್ನ ಪೂರ್ತಿ, ಬಾಗಿಲ ಹತ್ತಿರ ಜನ ಸೇರಿ, ಹುಚ್ಚಿ ಅನ್ನೋ ತನಕವೂ ನೆಲವೆಲ್ಲ ಕ್ಲೀನ್ ಮಾಡಿದೆ,' ಅಂದಾಗ ಅವಳಿನ್ನೂ ದೀಪದ ಪಕ್ಕದಲ್ಲೇ ನಿಂತಿದ್ದಳು.

ಈಗ, ಅವಳು ಮಾತು ಮುಗಿಸಿದ ಮೇಲೆ, ನಾನು ಮೂಲೆಯಲ್ಲೇ ಕುರ್ಚಿಯ ಮೇಲೆ ಕೂತೇ ಹಿಂದೆ ಮುಂದೆ ತೂಗುತ್ತ ಇದ್ದೆ. 'ನಿನ್ನನ್ನ ಪತ್ತೆ ಹಚ್ಚೋದಕ್ಕೆ ಒಂದು ಮಾತಿದೆಯಲ್ಲಾ ಯಾವುದು ಅದು ಅಂತ ದಿನಾ ನೆನಪು ಮಾಡಿಕೊಳ್ಳುತ್ತೇನೆ, ನಾಳೆಗೆ ಅದು ಮರೆತು ಹೋಗಲ್ಲ ಅಂತ ಈಗ ಅನಿಸತಾ ಇದೆ, ಯಾವಾಗಲೂ ಅದೇ ಮಾತು ಹೇಳತಾ ಇದ್ದೆ, ಆದರೂ ಎಚ್ಚರ ಆದಾಗ ನಿನ್ನ ಕಂಡು ಹಿಡಿಯುವ ಮಾತು ಯಾವುದು ಅಂತ ಮರೆತು ಹೋಗಿರತ್ತೆ,' ಅಂದೆ. ಅದಕ್ಕೆ ಅವಳು, 'ಮೊದಲನೇ ದಿನ ಆ ಮಾತು ಕಂಡು ಹಿಡಿದದ್ದು ನೀನೇ,' ಅಂದಳು. ಅದಕ್ಕೆ ನಾನು, 'ನಿನ್ನ ಬೂದಿ ಕಣ್ಣು ನೋಡಿದ್ದೆನಲ್ಲಾ ಅದಕ್ಕೇ ಆ ಮಾತು ಕಂಡುಹಿಡಿದೆ. ಮಾರನೆಯ ಬೆಳಿಗ್ಗೆ ಜ್ಞಾಪಕ ಇರೋದೇ ಇಲ್ಲ ನನಗೆ,' ಅಂದೆ. ಅವಳು ಮುಷ್ಟಿ ಕಟ್ಟಿ, ದೀಪದ ಪಕ್ಕದಲ್ಲಿ ನಿಂತು, ದೊಡ್ಡದಾಗಿ ಉಸಿರೆಳೆದುಕೊಂಡು, 'ನಾನು ಈಗ ಯಾವ ಊರಲ್ಲಿ ಅದನ್ನ ಬರೀತಾ ಇದೇನೆ ಅಂತಾದರೂ ನಿನಗೆ, ಕೊನೇಪಕ್ಷ, ನೆನಪು ಇದ್ದಿದ್ದರೆ,' ಅಂದಳು.

ಬಿಗಿದುಕೊಂಡಿದ್ದ ಅವಳ ಹಲ್ಲು ದೀಪದ ಬೆಳಕಿನಲ್ಲಿ ಹೊಳೆದದ್ದು ಕಂಡೆ. 'ಈಗ ನಿನ್ನ ಮುಟ್ಟಬೇಕು ಅನಿಸತ್ತೆ,' ಅಂದೆ. ದೀಪವನ್ನು ನೋಡುತ್ತಿದ್ದ ಮುಖವನ್ನು ಮೇಲೆತ್ತಿದಳು. ಅವಳ ಹಾಗೆ, ಅವಳ ಕೈಗಳ ಹಾಗೆ ಹದವಾಗಿ ಬೆಂದು ಸುಡುತಿದ್ದ ಅವಳ ನೋಟ ನನ್ನನ್ನು ಕಂಡಿತು ಅಂತ ಕುರ್ಚಿಯಲ್ಲಿ ತೂಗತ್ತಾ ಮೂಲೆಯಲ್ಲಿ ಕೂತಿದ್ದ ನನಗೆ ಅನಿಸಿತು. 'ಯಾವತ್ತೂ ಹಾಗನ್ನಲಿಲ್ಲ ನೀನು,' ಅಂದಳು 'ಈಗ ಹೇಳತಾ ಇದ್ದೇನೆ, ನಿಜ ನನ್ನ ಮಾತು,' ಅಂದೆ. ದೀಪದ ಇನ್ನೊಂದು ಬದಿಯಿಂದ ಸಿಗರೇಟು ಕೇಳಿದಳು. ಸಿಗರೇಟಿನ ಮೋಟು ನನ್ನ ಬೆರಳುಗಳ ಮಧ್ಯ ಮಾಯವಾಗಿತ್ತು. ಸಿಗರೇಟು ಸೇದುತ್ತಿದ್ದೆ ಅನ್ನುವುದನ್ನೇ ಮರೆತಿದ್ದೆ. ಅವಳು, 'ನಾನೆಲ್ಲಿ ಬರೆದೆ ಅನ್ನೋದು ಯಾಕೋ ನೆನಪೇ ಆಗತಾ ಇಲ್ಲ,' ಅಂದಳು. 'ನಾಳೆ ದಿನ ನನಗೂ ಯಾಕೆ ನೆನಪು ಆಗಲ್ಲವೋ ಅದೇ ಕಾರಣಕ್ಕೇ,' ಅಂದೆ